# ಅನುಬಂಧ-(೨)

ದೂರ ಗ್ರಾಮಪಂಚಾಯಿತಿ, ಮೈಸೂರು ತಾಲ್ಲೂಕು ಮೈಸೂರು ಜಿಲ್ಲೆ

## ಸಿವಿಲ್ ಕಾಮಗಾರಿ ನಿರ್ವಹಿಸಲು ಕಾರ್ಯದೇಶ

ವಿಷಯಃ- ಸಿವಿಲ್ ಕಾಮಗಾರಿ ನಿರ್ವಹಿಸಲು ಕಾರ್ಯಾದೇಶ ನೀಡುವ ಕುರಿತು.

ಉಲ್ಲೇಖಃ- 1. ಬಡಾವಣೆ ನಕ್ಷೆಗೆ ಈ ಕಛೇರಿಯಿಂದ ಅನುಮತಿ ನೀಡಲಾಗಿರುವ ಪತ್ರದ ದಿನಾಂಕಃ01-07-2025

2. ತಮ್ಮ ಪತ್ರ ದಿನಾಂಕಃ 30-06-2025

****************

ಉಲ್ಲೇಖಿತ (1)ರಲ್ಲಿ ಗ್ರಾಮಪಂಚಾಯಿತಿವತಿಯಿಂದ ಬಡಾವಣೆ ನಕ್ಷೆಗೆ ನೀಡಲಾಗಿರುವ ಅನುಮತಿ ಪತ್ರದ ಆಧಾರದ ಮೇಲೆ ಸಿವಿಲ್ ಕಾಮಗಾರಿ ಪ್ರಾರಂಭಿಸಲು ಅಂದಾಜು ಪಟ್ಟಿಯನ್ನು ಅರ್ಜಿದಾರರು ಸಲ್ಲಿಸಿದ್ದು, ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

"ಬಡಾವಣೆಯನ್ನು ನಿಗಧಿತ ಅವಧಿಯೊಳಗೆ ಸ್ಪೆಸಿಫಿಕೇಷನ್ ಪ್ರಕಾರ ಅಭಿವೃದ್ದಿಪಡಿಸುವುದಾಗಿಯೂ, ಒಂದುವೇಳೆ ನಿಗಧಿತ ಅವಧಿಯೊಳಗೆ ಬಡಾವಣೆಯನ್ನು ಅಭಿವೃದ್ದಿಪಡಿಸದಿದ್ದಲ್ಲಿ, ಗ್ರಾಮಪಂಚಾಯಿತಿವತಿಯಿಂದ ಬಿಡುಗಡೆಯಾಗದ ಬಡಾವಣೆಯಲ್ಲಿನ ಉಳಿಕೆ ನಿವೇಶನಗಳನ್ನು ಗ್ರಾಮಪಂಚಾಯಿತಿ ಸುಪರ್ದಿಗೆ ತೆಗೆದುಕೊಳ್ಳಲು ತಮ್ಮ ಯಾವುದೇ ಆಕ್ಷೇಪಣೆ ಇಲ್ಲವೆಂಬುದಾಗಿ" 100/- ರೂ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಿರುತ್ತಾರೆ.

ಹಾಗೂ

ಬಡಾವಣೆ ಅಭಿವೃದ್ದಿದಾರರು ದಿನಾಂಕಃ 30.5.25ರಂದು ಉದ್ಯಾನವನ, ನಾಗರೀಕ ಸೌಲಭ್ಯ, ನಿವೇಶನ ಹಾಗೂ ರಸ್ತೆಗಳಿಗೆ ಕಾಯ್ದಿರಿಸಿದ ಪ್ರದೇಶವನ್ನು ಮುಕ್ತಟೆಯಾಗಿ ಪರಿತ್ಯಜನಾ ಪತ್ರದ ಮೂಲಕ ರಾಜ್ಯಪಾಲರ ಹೆಸರಿನಲ್ಲಿ ನೋಂದಣಿ ಮಾಡಿ ನೀಡಿರುತ್ತಾರೆ.

ಆದ್ದರಿಂದ ಅಂದಾಜುಪಟ್ಟಿಯಲ್ಲಿರುವ ಸ್ಪೆಸಿಫಿಕೇಷನ್‌ಗಳಿಗೆ ಅನುಗುಣವಾಗಿ ಬಡಾವಣೆ ಅಭಿವೃದ್ದಿ ಕಾಮಗಾರಿಯನ್ನು ಕೈಗೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ಕಾರ್ಯಾದೇಶ ನೀಡಲಾಗಿದೆ.

1. ಕುಡಿಯುವ ನೀರಿನ ಸೌಲಭ್ಯ ಒದಗಿಸುವುದಕ್ಕೆ ಸಂಬಂಧಿಸಿದಂತೆ, ಅಳವಡಿಸಲಾಗುವ ಪೈಪ್‌ಲೈನ್ ಹೆಚ್.ಡಿ.ಪಿ.ಇ. ಪೈಪ್‌ಲೈನ್ ಆಗಿರಬೇಕು ಮತ್ತು ಯೂ.ಜಿ.ಡಿ.ಸೌಲಭ್ಯಕ್ಕೆ ಸಂಬಂಧಿಸಿದಂತೆ ಐ.ಎಸ್.ಐ ಗುರುತಿನ ಸ್ಟೋನ್‌ವೇರ್ ಪೈಪ್‌ಲೈನ್ ಮತ್ತು ಮಳೆನೀರು ಸಂಗ್ರಹಣೆ ಅನ್ನು ಕಡ್ಡಾಯವಾಗಿ ಅಳವಡಿಸಬೇಕು.
2. ಖಾಸಗಿ ಬಡಾವಣೆಯ ವಿಸ್ತೀರ್ಣವು ಹತ್ತು ಎಕರೆ ಪ್ರದೇಶದೊಳಗಿದ್ದರೆ ಮಿನಿವಾಟರ್ ಸ್ಟೋರೇಜ್ ಟ್ಯಾಂಕ್‌ಗಳನ್ನು ನಿರ್ಮಿಸಲು/ ಹತ್ತು ಎಕರೆಗಿಂತ ಹೆಚ್ಚಿನ ವಿಸ್ತೀರ್ಣವಾಗಿದ್ದಲ್ಲಿ ಓವರ್‌ಹೆಡ್ ಟ್ಯಾಂಕ್ (ಓ.ಹೆಚ್.ಟಿ) ಅನ್ನು ಬಡಾವಣೆಯ ನಿವಾಸಿಗಳಿಗಾಗಿ ಕುಡಿಯುವ ನೀರು ಸರಬರಾಜು ಮಾಡಲು ನಿರ್ಮಿಸಬೇಕು.
3. ಈ ಕಾರ್ಯಾದೇಶ ಸ್ವೀಕರಿಸಿದ ಅರವತ್ತು ದಿನಗಳೊಳಗೆ ಕಾಮಗಾರಿ ಪ್ರಾರಂಭಿಸತಕ್ಕದ್ದು ಹಾಗೂ ಈ ಅಭಿವೃದ್ಧಿ ಕಾಮಗಾರಿಗಳನ್ನು ಕಾರ್ಯಾದೇಶ ಸ್ವೀಕರಿಸಿದ ದಿನದಿಂದ ಎರಡು ವರ್ಷಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು. ನಿಗಧಿತ ಅವಧಿಯೊಳಗೆ (ಅಂದರೆ ಕಾರ್ಯಾದೇಶ ಸ್ವೀಕರಿಸಿದ ಅರವತ್ತು ದಿನಗಳೊಳಗೆ) ಯಾವುದೇ ಸಿವಿಲ್ ಕಾಮಗಾರಿಯನ್ನು ಪ್ರಾರಂಭಿಸದಿದ್ದಲ್ಲಿ, ಸಿವಿಲ್ ಕಾಮಗಾರಿ ಪ್ರಾರಂಭಿಸಲು ಗ್ರಾಮಪಂಚಾಯಿತಿಯಿಂದ ನೀಡಲಾಗಿದ್ದ ಕಾರ್ಯದೇಶ ತಂತಾನೇ ರದ್ದಾಗುತ್ತದೆ.

(ಹೆಸರು ಮತ್ತು ಸಹಿ)
ಪಂಚಾಯಿತಿ ಅಭಿವೃದ್ದಿ ಅಧಿಕಾರಿ
ದೂರ ಗ್ರಾಮಪಂಚಾಯಿತಿ
ಮೈಸೂರು ತಾಲ್ಲೂಕು.

Sri Vastava Township Pravate Limited
Mysuru